# All India Radio: Bangalore
# National Bulletin In Kannada
# 29.06.2026  1.10  pm

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**29.06.2026  1.10  pm**

**<>><><*><><<>**

ಮುಖ್ಯಾಂಶಗಳು

**೧. ನವದೆಹಲಿಯಲ್ಲಿಂದು ಶೌರ್ಯ ಪ್ರಶಸ್ತಿ ಪ್ರದಾನ ಮಾಡಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು**

**೨. ಪ್ರಧಾನಿ ನರೇಂದ್ರ ಮೋದಿ ಸೀಶೆಲ್ಸ್ ಪ್ರವಾಸ ; ಭಾರತೀಯ ಸಮುದಾಯದೊಂದಿಗೆ ಮಾತುಕತೆ ; ಹಿಂದೂ ದೇವಾಲಯಕ್ಕೆ ಭೇಟಿ**

**೩. ಅಯೋಧ್ಯೆ ರಾಮಮಂದಿರ ದೇಣಿಗೆ ಅಕ್ರಮ ಆರೋಪ ; ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯ ತುರ್ತು ವಿಚಾರಣೆ ನಿರಾಕರಿಸಿದ ಸುಪ್ರೀಂಕೋರ್ಟ್**

**೪. ಅಸ್ಸಾಂನಲ್ಲಿ ಪ್ರವಾಹ ; ೨೨ ಸಾವಿರಕ್ಕೂ ಹೆಚ್ಚು ಮಂದಿಗೆ ಸಂಕಷ್ಟ ರೈಲ್ವೆ ಸೇತುವೆ ಭಾಗಶಃ ಕುಸಿತ**

**೫. ಫಿಫಾ ವಿಶ್ವಕಪ್ ಫುಟ್ಬಾಲ್ ನಾಕೌಟ್ ಹಂತ ; ಇಂದು ರಾತ್ರಿ ಬ್ರೆಜಿಲ್-ಜಪಾನ್ ತಂಡಗಳು ಮುಖಾಮುಖಿ**

**<>><><*><><<>**

ಭಾರತದ ಸಶಸ್ತ್ರ ಪಡೆಗಳು, ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳು ಮತ್ತು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪೊಲೀಸ್ ಸಿಬ್ಬಂದಿಯ ಅಪ್ರತಿಮ ಸಾಹಸ ಹಾಗೂ ಶೌರ್ಯವನ್ನು ಗೌರವಿಸುವ ನಿಟ್ಟಿನಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದು ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ '೨೦೨೬ರ ಎರಡನೇ ರಕ್ಷಣಾ ಗೌರವ ಸಮಾರಂಭ'ದಲ್ಲಿ ಶೌರ್ಯ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ. ಈ ಸಮಾರಂಭ ಇಂದು ಸಂಜೆ ೫ ಗಂಟೆಗೆ ನಡೆಯಲಿದೆ. ಸಶಸ್ತ್ರ ಪಡೆಗಳು ಮತ್ತು ಇತರ ಭದ್ರತಾ ಸಂಸ್ಥೆಗಳ ಸಿಬ್ಬಂದಿ ತೋರಿದ ಅಸಾಧಾರಣ ಶೌರ್ಯದ ಕಾರ್ಯಗಳನ್ನು ಗುರುತಿಸಿ ಈ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಜಮ್ಮು ಮತ್ತು ಕಾಶ್ಮೀರ, ಈಶಾನ್ಯ ಭಾರತ ಹಾಗೂ ದೇಶದ ಗಡಿಭಾಗಗಳಲ್ಲಿ ಭಯೋತ್ಪಾದನೆ, ದಂಗೆಗಳು ಮತ್ತು ಶತ್ರುಗಳ

ಬೆದರಿಕೆಗಳ ವಿರುದ್ಧ ಭಾರತವು ನಡೆಸುತ್ತಿರುವ ನಿರಂತರ ಹೋರಾಟವನ್ನು ಈ ಪ್ರಶಸ್ತಿಗಳು ಪ್ರತಿಬಿಂಬಿಸುತ್ತವೆ. ಇದರಜೊತೆಗೆ, ವಾಯುಯಾನ, ಕಡಲ ಕಾರ್ಯಾಚರಣೆಗಳು ಮತ್ತು ಮಾನವೀಯ ನೆರವು ಹಾಗೂ ರಕ್ಷಣಾ ಕಾರ್ಯಾಚರಣೆಗಳ ವೇಳೆ ಪ್ರದರ್ಶಿಸಲಾದ ಅಸಾಧಾರಣ ಧೈರ್ಯವನ್ನೂ ಈ ಪ್ರಶಸ್ತಿಗಳ ಮೂಲಕ ಗೌರವಿಸಲಾಗುತ್ತಿದೆ.

**<>><><*><><<>**

ಸೀಶೆಲ್ಸ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರಿಂದು ವಿಕ್ಟೋರಿಯಾದಲ್ಲಿ ಸೀಶೆಲ್ಸ್‌ನಲ್ಲಿ ನೆಲೆಸಿರುವ ಭಾರತೀಯ ಸಮುದಾಯವನ್ನು ಭೇಟಿ ಮಾಡಿದರು. ಬಳಿಕ ಪ್ರಧಾನಿ, ವಿಕ್ಟೋರಿಯಾದ ಕ್ವಿನ್ಸಿ ರಸ್ತೆಯಲ್ಲಿರುವ ಅರುಳ್‌ಮಿಹು ನವಶಕ್ತಿ ವಿನಯಗಾರ್ ದೇವಾಲಯಕ್ಕೆ ಭೇಟಿ ನೀಡಿದರು. ಈ ದೇವಾಲಯ ೧೯೯೨ರಲ್ಲಿ ನಿರ್ಮಿಸಲಾಗಿದ್ದು, ದ್ರಾವಿಡ ಶೈಲಿ ಗೋಪುರ ಹೊಂದಿದೆ ಹಾಗೂ ಇಲ್ಲಿ ಭಗವಾನ್ ಗಣೇಶನ ಆರಾಧನೆ ನಡೆಯುತ್ತದೆ. ಪ್ರಧಾನಿ ನರೇಂದ್ರ ಮೋದಿ ಇಂದು ಪೀಸ್ ಪಾರ್ಕ್‌ನಲ್ಲಿರುವ ಮಹಾತ್ಮಾಗಾಂಧೀಜಿಯವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು. ನಿನ್ನೆ ಅವರು, ಸೀಶೆಲ್ಸ್ ದೇಶದ ಸ್ವಾತಂತ್ರ್ಯದ ೫೦ನೇ ವರ್ಷದ ಸುವರ್ಣ ಮಹೋತ್ಸವದ ರಾಷ್ಟ್ರೀಯ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ. ಇದೀಗ ಪ್ರಧಾನಿ ಸೀಶೆಲ್ ಪ್ರವಾಸವನ್ನು ಸಂಪನ್ನಗೊಳಿಸಿ, ಮರಳಿ ನವದೆಹಲಿಗೆ ಪ್ರಯಾಣ ಬೆಳೆಸಿದ್ದಾರೆ.

**<>><><*><><<>**

ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ದೇಣಿಗೆ ಮತ್ತು ಕಾಣಿಕೆಗಳ ನಿರ್ವಹಣೆಯಲ್ಲಿ ನಡೆದಿದೆ ಎನ್ನಲಾದ ಆರ್ಥಿಕ ಅಕ್ರಮಗಳ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಉಸ್ತುವಾರಿಯಲ್ಲಿ ತನಿಖೆ ನಡೆಸಬೇಕು ಎಂದು ಕೋರಿದ್ದ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ತುರ್ತು ವಿಚಾರಣೆಯನ್ನು ಸುಪ್ರೀಂಕೋರ್ಟ್ ನಿರಾಕರಿಸಿದೆ. ನ್ಯಾಯಮೂರ್ತಿಗಳಾದ ಎಂ.ಎಂ.ಸುಂದರೇಶ್ ಮತ್ತು ಶೀಲ್‌ನಾಗು ಅವರ ಪೀಠ ಪ್ರಕರಣದ ತುರ್ತು ಅಗತ್ಯವನ್ನು ಪ್ರಶ್ನಿಸಿತು. ಹಾಗೂ ಬೇಸಿಗೆ ರಜೆಯ ನಂತರ ನ್ಯಾಯಾಲಯ ಪುನರಾರಂಭಗೊಂಡ ತಕ್ಷಣವೇ ಅರ್ಜಿಯನ್ನು ಪಟ್ಟಿ ಮಾಡಲು ಆದೇಶಿಸಿದೆ. ವಕೀಲ ನರೇಂದ್ರ ಕುಮಾರ್ ಗೋಸ್ವಾಮಿ ಅವರು ಸಲ್ಲಿಸಿರುವ ಈ ಅರ್ಜಿಯಲ್ಲಿ, ದೇವಸ್ಥಾನದ ದೇಣಿಗೆಯ ದಾಖಲೆಗಳು ಮತ್ತು ಸಿಸಿಟಿವಿ ದೃಶ್ಯಾವಳಿಗಳನ್ನು ತಕ್ಷಣವೇ ಸಂರಕ್ಷಿಸಲು ಹಾಗೂ ರಾಷ್ಟ್ರೀಯ ಪ್ರಾಮುಖ್ಯತೆಯ ದೇವಸ್ಥಾನಗಳ ಕಾಣಿಕೆಗಳ ನಿರ್ವಹಣೆಯಲ್ಲಿ ಪಾರದರ್ಶಕತೆ ತರಲು ಸಾಂವಿಧಾನಿಕ ಸುರಕ್ಷತಾ ಕ್ರಮಗಳನ್ನು ರೂಪಿಸುವಂತೆ ಕೋರಲಾಗಿದೆ.

**<>><><*><><<>**

ಕೇಂದ್ರ ಸರ್ಕಾರ ಜನ ವಿಶ್ವಾಸ ನಿಬಂಧನೆಗಳ ತಿದ್ದುಪಡಿ ಕಾಯ್ದೆ-೨೦೨೬ರ ಮೂಲಕ ಕಾನೂನು ಮಾಪನ ಶಾಸ್ತ್ರ ಕಾಯ್ದೆ-೨೦೦೯ರ ಅಡಿಯಲ್ಲಿ ಇಂಪ್ರ್ಯೂಮೆಂಟ್ ನೋಟಿಸ್ ಮೆಕಾನಿಸಮ್ ಅಂದರೆ ಸುಧಾರಣಾ ಸೂಚನಾ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಗ್ರಾಹಕರ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವುದರ ಜೊತೆಗೆ ಸ್ವಯಂ ಪ್ರೇರಿತ ನಿಮಯ ಪಾಲನೆ ಉತ್ತೇಜಿಸುವುದು, ಅನಗತ್ಯ ಮೊಕದ್ದಮ್ಮೆಗಳನ್ನು ಕಡಿಮೆ ಮಾಡುವುದು ಮತ್ತು ಉದ್ಯಮಸ್ನೇಹಿ ವಾತಾವರಣ ನಿರ್ಮಿಸುವುದು ಈ ಸುಧಾರಣೆಯ ಮುಖ್ಯ ಉದ್ದೇಶವಾಗಿದೆ. ಈ ವ್ಯವಸ್ಥೆಯಡಿ ಪ್ರಮುಖವಾಗಿ ಮೊದಲ ಬಾರಿಗೆ ಸಣ್ಣಪುಟ್ಟ ಲೋಪದೋಷಗಳನ್ನು ಎಸಗುವ ಉತ್ಪಾದಕರು, ಆಮದುದಾರರು, ಪ್ಯಾಕರ್‌ಗಳು, ವರ್ತಕರು ಮತ್ತು ಎಂಎಸ್‌ಎಂಇ ಸೇರಿದಂತೆ ಇತರೆ ನಿಯಂತ್ರಿತ ಸಂಸ್ಥೆಗಳಿಗೆ ಶಿಕ್ಷೆ ವಿಧಿಸುವ ಮುನ್ನ ತಮ್ಮ ತಪ್ಪುಗಳನ್ನು ತಿದ್ದುಕೊಳ್ಳಲು, ಶಿಕ್ಷೆ ಅಥವಾ ದಂಡ ವಿಧಿಸುವ ಬದಲಿಗೆ ಒಂದು ಪೂರ್ವ ಎಚ್ಚರಿಕೆಯ ರೂಪದಲ್ಲಿ ಒಂದು ಸುವರ್ಣಾವಕಾಶ ನೀಡಲಾಗುತ್ತದೆ. ಆದರೆ ಈ ಸುಧಾರಣೆ ಗ್ರಾಹಕ ರಕ್ಷಣೆಯನ್ನು ಯಾವುದೇ ರೀತಿಯಲ್ಲೂ ದುರ್ಬಲಗೊಳಿಸುವುದಿಲ್ಲ ಎಂದು ಗ್ರಾಹಕ ವ್ಯವಹಾರಗಳ ಸಚಿವಾಲಯ ಸ್ಪಷ್ಟಪಡಿಸಿದೆ.

**<><><*><><<>**

ಅಸ್ಸಾಂ ಮತ್ತು ನೆರೆಯ ಅರುಣಾಚಲ ಪ್ರದೇಶದಲ್ಲಿ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರಿದ್ದು, ೬ ಜಿಲ್ಲೆಗಳ ೨೨ ಸಾವಿರಕ್ಕೂ ಹೆಚ್ಚು ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ. ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಾರ ಧೇಮಾಜಿ, ನಲ್ಬಾರಿ, ದಿಬ್ರುಗಢ್, ಚಿರಂಗ್, ಲಖಿಂಪುರ್ ಮತ್ತು ಕೊಕ್ರಜಾರ್ ಜಿಲ್ಲೆಗಳು ಪ್ರವಾಹಕ್ಕೆ ಹಾನಿಗೊಳಗಾಗಿವೆ. ಅದರಲ್ಲೂ ಧೇಮಾಜಿ ಜಿಲ್ಲೆಯಲ್ಲಿ ಪ್ರವಾಹ ತೀವ್ರವಾಗಿದ್ದು, ೧೫ ಸಾವಿರಕ್ಕೂ ಹೆಚ್ಚು ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಒಟ್ಟು ೯೬ ಹಳ್ಳಿಗಳು ಜಲಾವೃತಗೊಂಡಿದ್ದು, ಸುಮಾರು ೧ ಸಾವಿರದ ೬೯೦ ಹೆಕ್ಟೇರ್ ಕೃಷಿ ಭೂಮಿ ಮತ್ತು ೪೮ ಸಾವಿರಕ್ಕೂ ಹೆಚ್ಚು ಜಾನುವಾರುಗಳು ತೊಂದರೆಗೊಳಗಾಗಿವೆ. ಶಿವಸಾಗರ ಜಿಲ್ಲೆಯ ದಿಸಾಂಗ್ ನದಿಯು ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಮತ್ತೊಂದೆಡೆ ಭಾರೀ ಮಳೆ ಮತ್ತು ನದಿ ದಂಡೆಯ ಸವೆತದಿಂದಾಗಿ ಧೇಮಾಜಿ ಜಿಲ್ಲೆಯ ಸಿಮೆನ್ ನದಿಯ ರೇಲ್ವೆ ಸೇತುವೆಯ ಕಂಬವೊಂದು ಅಸ್ಥಿರಗೊಂಡು ಸೇತುವೆ ಭಾಗಶಃ ಕುಸಿದಿದೆ. ಮಳೆ ಮುಂದುವರಿದಿರುವುದರಿಂದ ಕಟ್ಟೆಚ್ಚರ ವಹಿಸಲು ಜಿಲ್ಲಾಡಳಿತಗಳಿಗೆ ಸೂಚಿಸಲಾಗಿದೆ.

**<><><*><><<>**

ಜಮ್ಮು ಮತ್ತು ಕಾಶ್ಮೀರದಲ್ಲಿ ಜುಲೈ ೩ ರಿಂದ ಆರಂಭವಾಗಲಿರುವ ವಾರ್ಷಿಕ ಶ್ರೀ ಅಮರನಾಥ ಜಿ ಯಾತ್ರೆಗೆ ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ. ಯಾತ್ರೆಯು ಸುಗಮವಾಗಿ ಮತ್ತು ಸುರಕ್ಷಿತವಾಗಿ ಸಾಗುವಂತೆ ನೋಡಿಕೊಳ್ಳಲು ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗಿದೆ. ಅಧಿಕೃತವಾಗಿ ಯಾತ್ರೆ ಆರಂಭವಾಗುವ ಮುನ್ನ ಭದ್ರತಾ ವ್ಯವಸ್ಥೆಗಳು, ವಾಹನಗಳ ಬೆನ್ಗಾವಲು ಪಡೆ ಸಂಚಾರ ಮತ್ತು ಒಟ್ಟಾರೆ ಸನ್ನದ್ಧತೆಯನ್ನು ಪರಿಶೀಲಿಸುವ ನಿಟ್ಟಿನಲ್ಲಿ ಇಂದು ಪೂರ್ಣಪ್ರಮಾಣದ ತಾಲೀಮು ನಡೆಸಲಾಯಿತು ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ.

<>><><*><><<>

ಒಡಿಶಾದ ಪವಿತ್ರ ಕ್ಷೇತ್ರವಾದ ಪುರಿಯ ಶ್ರೀ ಜಗನ್ನಾಥ ದೇವಾಲಯದಲ್ಲಿ ಇಂದು ಮುಂಜಾನೆ ಸಾಂಪ್ರದಾಯಿಕ ಸಡಗರ ಮತ್ತು ವೈಭವದೊಂದಿಗೆ ಭಗವಾನ್ ಜಗನ್ನಾಥ್, ಬಲಭದ್ರ ಮತ್ತು ದೇವಿ ಸುಭದ್ರಾ ರವರ ಪವಿತ್ರ ದೇವ ಸ್ನಾನ ಯಾತ್ರೆ ನಡೆದಿದ್ದು, ಲಕ್ಷಾಂತರ ಭಕ್ತರು ಪುರಿ ನಗರಕ್ಕೆ ಹರಿದು ಬಂದಿದ್ದಾರೆ. ವಿಶ್ವಪ್ರಸಿದ್ಧ ರಥಯಾತ್ರೆಗೂ ಮುನ್ನ ನಡೆಯುವ ಈ ವಾರ್ಷಿಕ ಧಾರ್ಮಿಕ ಆಚರಣೆ ದೇವಸ್ನಾನ ಪೂರ್ಣಿಮೆಯ ಪವಿತ್ರ ದಿನದಂದು ನಡೆಯುತ್ತದೆ. ಇಂದು ಮುಂಜಾನೆ ದೇವತೆಗಳ ವಿಗ್ರಗಳನ್ನು ಭವ್ಯ ಮೆರವಣಿಗೆಯ ಮೂಲಕ ಸ್ನಾನಮಂಟಪಕ್ಕೆ ತರಲಾಯಿತು. ಅಲ್ಲಿ ವೇದಘೋಷ, ಶಂಖನಾದ ಮತ್ತು ಭಕ್ತಿ ಸಂಗೀತದ ನಡುವೆ ದೇವಸ್ಥಾನದ ಪವಿತ್ರ ಚಿನ್ನ ಬಾವಿಯಿಂದ ತರಲಾದ ೧೦೮ ಕಳಸಗಳ ಪೂಜಿತ ತೀರ್ಥದಿಂದ ದೇವತೆಗಳಿಗೆ ಮಂಗಳ ಸ್ನಾನ ಮಾಡಿಸಲಾಯಿತು.

<>><><*><><<>

ಯುಕೆ ಪ್ರವಾಸವನ್ನು ಯಶಸ್ವಿಯಾಗಿ ಸಂಪನ್ನಗೊಳಿಸಿರುವ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್, ಗ್ರೀಸ್‌ನ ಅಥೆನ್ಸ್ ದೇಶಕ್ಕೆ ಉನ್ನತಮಟ್ಟದ ಉದ್ಯಮ ನಿಯೋಗದೊಂದಿಗೆ ಭೇಟಿ ನೀಡುತ್ತಿದ್ದಾರೆ. ಈ ಭೇಟಿ ಉಭಯ ದೇಶಗಳ ನಡುವಿನ ವ್ಯಾಪಾರ, ಹೂಡಿಕೆ ಮತ್ತು ಕಾರ್ಯತಂತ್ರದ ಆರ್ಥಿಕ ಸಹಕಾರವನ್ನು ಬಲಪಡಿಸುವ ಉದ್ದೇಶ ಹೊಂದಿದೆ. ಗ್ರೀಸ್ ಭೇಟಿಯ ಸಂದರ್ಭದಲ್ಲಿ ಈ ನಿಯೋಗವು 'ಅಥೆನ್ಸ್ ಸ್ಟಾರ್ಟ್‌ಅಪ್ ಬಿಸಿನೆಸ್ ಇನ್ಕ್ಯುಬೇಟರ್' ನಲ್ಲಿ ನಡೆಯಲಿರುವ ಪ್ರಸ್ತುತಿಗಳು ಮತ್ತು ನವೋದ್ಯಮ ಪ್ರದರ್ಶನಗಳಲ್ಲಿ ಭಾಗವಹಿಸಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ. ಇದರ ಜೊತೆಗೆ ಖಾಸಗಿ ವಲಯದ ಸಹಭಾಗಿತ್ವವನ್ನು ಬಲಪಡಿಸಲು ಮತ್ತು ಹೊಸ ಸಹಯೋಗದ ಅವಕಾಶಗಳನ್ನು ಗುರುತಿಸಲು 'ಅಥೆನ್ಸ್ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಯಲ್ಲಿ ಭಾರತ

ಮತ್ತು ಗ್ರೀಸ್‌ನ ಪ್ರಮುಖ ಉದ್ಯಮಿಗಳೊಂದಿಗೆ ನಿಯೋಗವು ದುಂಡುಮೇಜಿನ ಸಭೆಗಳನ್ನು ನಡೆಸಲಿದೆ.

**<>><><*><><<>**

ಹ್ಯೂಸ್ಟನ್‌ನಲ್ಲಿ ಇಂದು ನಡೆಯಲಿರುವ ಫಿಫಾ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯ ನಾಕೌಟ್ ಹಂತದ ೩೨ರ ಸುತ್ತಿನ ಪಂದ್ಯದಲ್ಲಿ ಬ್ರಿಜಿಲ್ ಮತ್ತು ಜಪಾನ್ ತಂಡಗಳು ಮುಖಾಮುಖಿಯಾಗಲಿವೆ. ಈ ಪಂದ್ಯ ಭಾರತೀಯ ಕಾಲಮಾನ ರಾತ್ರಿ ೧೦.೩೦ಕ್ಕೆ ಆರಂಭವಾಗಲಿದೆ. ಇಂದು ಭಾರತೀಯ ಕಾಲಮಾನ ಮಧ್ಯರಾತ್ರಿ ೨ ಗಂಟೆಗೆ ಅಮೆರಿಕದ ಬಾಸ್ಟನ್ ಕ್ರೀಡಾಂಗಣದಲ್ಲಿ ನಡೆಯಲಿರುವ ೩೨ರ ಸುತ್ತಿನ ಮತ್ತೊಂದು ಪಂದ್ಯದಲ್ಲಿ ಜರ್ಮನಿ ಮತ್ತು ಪೆರಾಗ್ವೆ ತಂಡಗಳು ಮುಖಾಮುಖಿಯಾಗಲಿವೆ.

**<>><><*><><<>**

ಅಮೆರಿಕದ ಕ್ಯಾಲಿಫೋರ್ನಿಯಾದ ಫುಲ್ಲರ್‌ಟನ್‌ನಲ್ಲಿ ನಡೆದ ಯುಎಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಂಭಾಗದ ಫೈನಲ್ ಪಂದ್ಯದಲ್ಲಿ ಭಾರತದ ಕಿಡಂಬಿ ಶ್ರೀಕಾಂತ್ ಚೇನಾ ತೈಪೆಯ ಸು ಲಿ ಯಾಂಗ್ ವಿರುದ್ಧ ೧೫-೨೧, ೨೧-೧೬, ೬-೨೧ ಅಂತರದಲ್ಲಿ ಪರಾಭವಗೊಂಡಿದ್ದಾರೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>**